## ಕರ್ನಾಟಕ ಸರ್ಕಾರ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು

# ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ

# ಜಿಲ್ಲಾ॥ ಬಾಗಲಕೋಟೆ

2026–27 ನೇ ಸಾಲಿಗೆ ಸಿದ್ದಪಡಿಸಿದ ಉತ್ತಮ ದರ್ಜೆ ಆಹಾರ (ಪಥ್ಯಾಹಾರ–ಅನ್ನ & ಸಾಂಬಾರ) ಬಾಳೆಹಣ್ಣು, ಬೇಯಿಸಿದ ಕೋಳಿ ಮೊಟ್ಟೆ, ಟೀ ಹಾಗೂ ಉತ್ತಮ ದರ್ಜೆಯ ಬ್ರೆಡ್ ಸರಬರಾಜು ಮಾಡುವ ಟೆಂಡರ್ ಫಾರ್ಮ್ ಹಾಗೂ ಟೆಂಡರ್ ನಿಬಂಧನೆಗಳು

# 2026–27

ಕರ್ನಾಟಕ ಸರ್ಕಾರ

**ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ**

**ತಾ: ಜಮಖಂಡಿ** **ಇಟಚಿಟ:** cmoghjkd@gmail.com **ಜಿಲ್ಲಾ: ಬಾಗಲಕೋಟ**

ಸಂ.ತಾ.ಸಾ.ಆ.ಜ/ಪಥ್ಯಾಹಾರ/2026–27 ದಿನಾಂಕ: 06.06.2026

# ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

****************

2026–27 ನೇ ಸಾಲಿನ ತಾಲೂಕಾ ಸಾರ್ವಜನಿಕ ಆಸ್ಪತ್ರೆ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಜಮಖಂಡಿ ಈ ಆಸ್ಪತ್ರೆಯಲ್ಲಿ ದಾಖಲಾಗುವ ಒಳರೋಗಿಗಳಿಗೆ ಸಿದ್ದಪಡಿಸಿದ ಉತ್ತಮ ದರ್ಜೆಯ ಆಹಾರ (ಪಥ್ಯಾಹಾರ–ಅನ್ನ ಸಾಂಬರ) ಬಾಳೆಹಣ್ಣು, ಬೇಯಿಸಿದ ಕೋಳಿ ಮೊಟ್ಟೆ, ಟೀ, ಹಾಗೂ ಉತ್ತಮ ದರ್ಜೆಯ ಬ್ರೆಡ್ ಸರಬರಾಜು ಮಾಡಲು ಇ–ಪ್ರೋಕ್ಯೂರ್ಮೆಂಟ್ ಪ್ಲಾಟ್ ಫಾರ್ಮ್‌ನಲ್ಲಿ ಟೆಂಡರ್ ಕರೆಯಲಾಗಿದೆ. ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳ ವಿವರವನ್ನು Website: http://kppp.karnataka.gov.in ನಲ್ಲಿ ವೀಕ್ಷಿಸಬಹುದಾಗಿರುತ್ತದೆ. ಹಾಗೂ ಮೇಲ್ಕಂಡ ವಿಳಾಸದ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.

**ಆಡಳಿತ ವೈದ್ಯಾಧಿಕಾರಿಗಳು**
**ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ**
**ಜಿ:ಬಾಗಲಕೋಟೆ**

ಕರ್ನಾಟಕ ಸರ್ಕಾರ

# ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ

ತಾ: ಜಮಖಂಡಿ **Email:** cmoghjkd@gmail.com ಜಿಲ್ಲಾ: ಬಾಗಲಕೋಟ

ಸಂ.ತಾ.ಸಾ.ಆ.ಜ/ಪಥ್ಯಾಹಾರ/2026–27/ ದಿನಾಂಕ: 06.06.2026

## ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ

ತಾಲೂಕಾ ಸಾರ್ವಜನಿಕ ಆಸ್ಪತ್ರೆ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಜಮಖಂಡಿ ಈ ಆಸ್ಪತ್ರೆಗೆ ಸನ್–2026–27 ನೇ ಸಾಲಿನ ಸಿದ್ದಪಡಿಸಿದ ಉತ್ತಮ ದರ್ಜೆಯ ಆಹಾರ (ಪಥ್ಯಾಹಾರ–ಅನ್ನ ಸಾಂಬರ), ಬಾಳೆಹಣ್ಣು, ಬೇಯಿಸಿದ ಕೋಳಿ ಮೊಟ್ಟೆ, ಟೀ ಹಾಗೂ ಉತ್ತಮ ದರ್ಜೆ ಬ್ರೆಡ್ ಸರಬರಾಜು ಮಾಡಲು ದ್ವಿ–ಲಕೋಟೆ ಪದ್ದತಿಯಲ್ಲಿ ಇ–ಪ್ರೋಕ್ಯೂರ್ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕದಿಂದ: 31–03–2027 ರ ವರೆಗೆ ಮಾತ್ರ ಚಾಲ್ತಿ ಇರುತ್ತದೆ. ಟೆಂಡರಿನ ಒಟ್ಟು ಅಂದಾಜು ಮೌಲ್ಯ ವರ್ಷಕ್ಕೆ ರೂ. 90,00,000/–ಗಳ (ರೂ: ತೊಂಬತ್ತು ಲಕ್ಷ) ಟೆಂಡರು ವಿವರಗಳು ಈ ಕೆಳಗಿನಂತಿರುತ್ತದೆ.

<table>
<tr><td>1</td><td>ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ</td><td colspan="3">ಸಂ.ತಾ.ಸಾ.ಆ.ಜ/ಪಥ್ಯಾಹಾರ/2026–27 ದಿನಾಂಕ: 12.06.2026</td></tr>
<tr><td rowspan="3">2</td><td rowspan="3">ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ</td><td>ಕ್ರ ಸಂ</td><td>ವಿವರ</td><td>ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ</td></tr>
<tr><td>1</td><td>Group A:</td><td></td></tr>
<tr><td>2</td><td>Group B:</td><td></td></tr>
<tr><td>3</td><td>E-Portel ಮೂಲಕ ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ</td><td colspan="3">ದಿನಾಂಕ: 12.06.2026 ರಿಂದ 26.06.2026</td></tr>
<tr><td>4</td><td>E-Portel ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ</td><td colspan="3">ದಿನಾಂಕ: 26.06.2026 ರ ಸಂಜೆ 5=30 ಗಂಟೆ</td></tr>
<tr><td>5</td><td>Sample Submit ದಿನಾಂಕ</td><td colspan="3">24.06.2026 ಬೆಳಗ್ಗೆ 11=30 ಗಂಟೆಗೆ</td></tr>
<tr><td>6</td><td>E-Portel ನ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ</td><td colspan="3">ದಿನಾಂಕ: 29.06.2026 ರ ಬೆಳಗ್ಗೆ 11=00 ಗಂಟೆಗೆ (ಇ–ಪ್ರೊಕ್ಯೂರ್‌ಮೆಂಟ್)</td></tr>
<tr><td>7</td><td>E-Portel ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ</td><td colspan="3">ದಿನಾಂಕ: 03.07.2026 ರ ಬೆಳಗ್ಗೆ 11=00 ಗಂಟೆಗೆ (ಇ–ಪ್ರೊಕ್ಯೂರ್‌ಮೆಂಟ್) (ಸಂಭವನೀಯ)</td></tr>
<tr><td>8</td><td>ಇ.ಎಂ.ಡಿ ಮೊತ್ತ (2.5%)</td><td colspan="3">ಅನುಬಂಧ–1 ರ ನಮೂನೆಯಲ್ಲಿ ಇಒಆ Declaration ಸಹಿಯೊಂದಿಗೆ ಸಲ್ಲಿಸುವುದು.<br>ರೂ: 2,25,000.00 (ರೂ: ಎರೆಡು ಲಕ್ಷದ ಇಪ್ಪತ್ತೈದು ಸಾವಿರ ಮಾತ್ರ)</td></tr>
<tr><td>9</td><td>ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ ದೂರವಾಣಿ ಸಂಖ್ಯೆ:</td><td colspan="3">www.kppp.karnataka.gov.in<br>ಆಡಳಿತ ವೈದ್ಯಾಧಿಕಾರಿಗಳು,<br>ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ ಜಿ: ಬಾಗಲಕೋಟೆ<br>ಜ–ಟಚಿಟ: cmoghjkd@gmail.com ದೂರವಾಣಿ ಸಂಖ್ಯೆ:</td></tr>
</table>

| | | |
|---|---|---|
| | | 9448640421 |

ಆಡಳಿತ ವೈದ್ಯಾಧಿಕಾರಿಗಳು
ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ
ಜಿ:ಬಾಗಲಕೋಟೆ

# ಟೆಂಡರ್ ದಾಖಲೆಗಳು ಮತ್ತು ಸೂಚನೆಗಳು

**1. ಟೆಂಡರ್‌ದಾರರ ಅರ್ಹತೆ:–**

ಟೆಂಡರ್‌ದಾರರು ಯಾವುದೇ ಕಾನೂನಿನ ಅಡಿಯಲ್ಲಿ ವ್ಯವಹಾರಗಳ ಬಗ್ಗೆ ಅನರ್ಹರೆಂದು ಪರಿಗಣಿಸಿರಬಾರದು, ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳ ಬಗ್ಗೆ ವಿವರಗಳನ್ನು ಈ ದಸ್ತಾವೇಜು ದಾಖಲೆಗಳಲ್ಲಿ ಟೆಂಡರ್‌ದಾರರಿಗೆ ನೀಡಿದೆ. ಈ ಬಗ್ಗೆ ಯಾವುದೇ ವಿಷಯಗಳ ಬಗ್ಗೆ ಸ್ಪಷ್ಟೀಕರಣದ ವಿಷಯವನ್ನು ಲಿಖಿತವಾಗಿ ನೀಡಿ ಟೆಂಡರ್ ಕರೆದಿರುವ
ಪ್ರಾಧಿಕಾರದಿಂದ ಮಾಹಿತಿ ಪಡೆಯಬಹುದು.

**2. ಟೆಂಡರ್ ದಾಖಲೆಗಳ ತಿದ್ದುಪಡಿ:–**

ಟೆಂಡರ ಸಲ್ಲಿಸುವ ಅಂತೀಮ ದಿನಾಂಕಕ್ಕೆ ಮುನ್ನ ಈ ಬಗ್ಗೆ ಇರುವ ಟೆಂಡರ್ ದಾಖಲೆಗಳನ್ನು ತಿದ್ದುಪಡಿ ಮಾಡುವ, ಬದಲಾಯಿಸುವ ಅಧಿಕಾರ ಟೆಂಡರ ಪ್ರಾಧಿಕಾರ ಹೊಂದಿದೆ. ಈ ರೀತಿ ಯಾವುದೇ ತಿದ್ದುಪಡಿ ಆದಲ್ಲಿ ಅದನ್ನು ಟೆಂಡರದಾರರಿಗೆ ಇ–ಪೋರ್ಟಲ್ ನಲ್ಲಿ ತಿಳಿಸಲಾಗುವುದು.

**3. ಟೆಂಡರ್ ದಸ್ತಾವೇಜುಗಳಲ್ಲಿರುವ ದಾಖಲೆಗಳು:–**

ಈ ಟೆಂಡರ್‌ನ ದಸ್ತಾವೇಜುಗಳಲ್ಲಿ ಟೆಂಡರ್ ಕರೆದಿರುವ ಬಗ್ಗೆ ವಿವರಗಳು, ಅರ್ಹತೆಗಳು ಮತ್ತು ನಿಬಂಧನೆಗಳು ಲಭ್ಯವಿದೆ
ಅಲ್ಲದೇ ಈ ಕೆಳಕಂಡ ಟೆಂಡರ್ ಮಾಹಿತಿಗಳು ಲಭ್ಯವಿರುತ್ತವೆ.

ಅ) ಟೆಂಡರ್‌ಗೆ ಸಂಬಂಧಿಸಿದಂತೆ ಸೂಚನೆಗಳು, ನಿಬಂಧನೆಗಳು ಮತ್ತು ಟೆಂಡರ್‌ನ ಷರತ್ತುಗಳನ್ನು ಮತ್ತು ತಾಂತ್ರಿಕ ವಿವರಗಳು.

ಆ) ಇ.ಎಂ.ಡಿ. ಹಾಗೂ ಕಾರ್ಯಾಧಾರಿತ ಭದ್ರತೆ (Peformance Security) ವಿವರಗಳು.

ಇ) **ಆರ್ಥಿಕ** ಬಿಡ್‌ನಲ್ಲಿ ದರ ನಮೂದಿಸಬೇಕಾದ ಸಾಮಗ್ರಿಗಳ ಪಟ್ಟಿ.

ಈ) ಟೆಂಡರ್ ಫಾರಂ ನಮೂನೆ–ಎ

ಟೆಂಡರ್‌ದಾರರು ಎಲ್ಲಾ ದಾಖಲೆಗಳು, ನಿಬಂಧನೆಗಳು ಮತ್ತು ಟೆಂಡರ್‌ನ ಷರತ್ತುಗಳನ್ನು ಹಾಗೂ ಟೆಂಡರ್‌ದಾರರಿಗೆ ಇರುವ
ಅರ್ಹತಾ ಸೂಚನೆಗಳನ್ನು ಪರಿಶೀಲಿಸಿ, ಅರ್ಥ ಮಾಡಿಕೊಂಡು ಸೂಕ್ತ ಮಾಹಿತಿ ಮತ್ತು ದಾಖಲಾತಿಗಳೊಂದಿಗೆ ಪೂರ್ಣ
ಪ್ರಮಾಣದಲ್ಲಿ ಟೆಂಡರ್ ಸಲ್ಲಿಸುವುದು. ಅಪೂರ್ಣ ಮಾಹಿತಿಯುಳ್ಳ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

**4. ಟೆಂಡರ್ ಜೊತೆಗೆ ಸಲ್ಲಿಸಬೇಕಾದ ದಾಖಲೆಗಳು:–**

ಟೆಂಡರ್ ಸಲ್ಲಿಸುವವರು ದ್ವಿ–ಲಕೋಟೆ ಪದ್ದತಿಯಲ್ಲಿ ಅಂದರೆ ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ಗಳನ್ನು E-Portel ಮೂಲಕ ಸಲ್ಲಿಸಬಹುದು.

**5. ಟೆಂಡರ್ ಫಾರಂ (ತಾಂತ್ರಿಕ ಕೋಟೆ) ಯಲ್ಲಿ ಅನುಕ್ರಮವಾಗಿ ಸಲ್ಲಿಸಬೇಕಾದ ದಾಖಲೆಗಳು:–**

01. ಟೆಂಡರ್ ಫಾರಂ- ಎ ತಾಂತ್ರಿಕ ದಾಖಲಾತಿಗಳ ಅರ್ಜಿ.

02. ಒಂದು ವರ್ಷಕ್ಕೆ ಬೇಕಾದ ಪಥ್ಯಾಹಾರ ಸಾಮಾಗ್ರಿಗಳು/ಸಿದ್ದಪಡಿಸಿದ ಆಹಾರ ಪದಾರ್ಥಗಳ ಒಟ್ಟು ಮೌಲ್ಯಕ್ಕೆ (ಟೆಂಡರ್ ಮೊತ್ತಕ್ಕೆ) ಬೇಕಾಗುವ ಇ.ಎಂ.ಡಿ. ಮೊತ್ತವನ್ನು ಕೆ.ಟಿ.ಪಿ.ಪಿ. ನಿಯಮಾನುಸಾರ ನಿಗಧಿಪಡಿಸಿ ಪಡೆದುಕೊಳ್ಳುವುದು.

03. ಜಿ.ಎಸ್.ಟಿ ನೋಂದಣೀ ಪ್ರಮಾಣ ಪತ್ರ ಹಾಗೂ ಟೆಂಡರದಾರರ ಸಂಸ್ಥೆಯಿಂದ ಜಿ.ಎಸ್.ಟಿ ಪಾವತಿಸಿದ ಹಿಂದಿನ 3 ವರ್ಷಗಳ 3ಬಿ ರಿರ್ಟನ್ಸ (2023-24, 2024-25, 2025-2026) ಸಲ್ಲಿಸುವುದು.

04. ಭಾರತ ಸರ್ಕಾರದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ FSSAI (Food Safety and Standards Authority of India) ದಿಂದ ಪಡೆದ ಹಾಗೂ 2026-27 ನೇ ಸಾಲಿಗೆ ಚಾಲ್ತಿಯಲ್ಲಿರುವ ಪರವಾನಿಗೆ ಹೊಂದಿರತಕ್ಕದ್ದು. (ದೃಢೀಕೃತ ಪ್ರತಿ ಸಲ್ಲಿಸುವುದು)

05. ಹಿಂದಿನ 3 ವರ್ಷಗಳ ಆದಾಯ ತೆರಿಗೆ ಪಾವತಿಸಿದ ದಾಖಲೆಗಳು ಅಸೆಸ್‌ಮೆಂಟ್ ವರ್ಷ (2023-24, 2024-25 & 2025-26)

06.ಚಾಲ್ತಿಯಲ್ಲಿರುವ ಬೇಕರಿ ಉದ್ದಿಮೆ ಪರವಾನಗೆ ದೃಢೀಕರಣ ಪತ್ರ (ಬ್ರೆಡ್ ಸರಬರಾಜುದಾರರಿಗೆ ಮಾತ್ರ)

07. ಟೆಂಡರ್ ಮೌಲ್ಯದ ಶೇ 5% ರಷ್ಟಕ್ಕೆ ಕಡಿಮೆ ಇಲ್ಲದ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಬ್ಯಾಂಕ್ ಗ್ಯಾರಂಟಿ ಸಲ್ಲಿಸತಕ್ಕದ್ದು.

08. ಚಾಲ್ತಿಯಲ್ಲಿರುವ ಉದ್ದಿಮೆ ಪರವಾನಗಿ ಪ್ರಮಾಣ ಪತ್ರ.

09. ಟೆಂಡರ್‌ದಾರರು ಕಪ್ಪು ಪಟ್ಟಿಗೆ ಸೇರಿಲ್ಲವೆಂದು ನೀಡಿರುವ ಸ್ವಯಂ ದೃಢೀಕರಣ ಪತ್ರ.

10. ಪ್ರಸ್ತುತ ಸಾಲಿನಲ್ಲಿ ಚಾಲ್ತಿಯಲ್ಲಿರುವ ಕ್ಯಾಟರಿಂಗ್ ಉದ್ದೆಮೆ ಪರವಾನಗಿ ಪತ್ರ-(ಸಿದ್ದಪಡಿಸಿದ ಪತ್ಯಾಹಾರ ಸರಬರಾಜುದಾರರಿಗೆ ಮಾತ್ರ)

11. ಸರ್ಕಾರಿ ಸ್ವಾಮ್ಯದ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ, ಸಹಕಾರಿ ಸಂಘಗಳ ಮಹಾ ನಿಬಂಧಕರಿಂದ ಅಥವಾ ಅಥವಾ ಸಕ್ಷಮ ಪ್ರಾಧಿಕಾರದಿಂದ ಪಡೆದ ಆರ್ಥಿಕ ಸಾಮರ್ಥ್ಯತಾ ಪ್ರಮಾಣ ಪತ್ರ (ಸದರಿ ಪ್ರಮಾಣ ಪತ್ರವನ್ನು ಟೆಂಡರ್ ಅರ್ಜಿ ಸಲ್ಲಿಸುವ ಆಯಾ ಆರ್ಥಿಕ ವರ್ಷದಲ್ಲಿ ಪಡೆದಿರತಕ್ಕದ್ದು)

12. ಸಿದ್ದಪಡಿಸಿದ ಪಥ್ಯಾಹಾರ ಸರಬರಾಜು ಮಾಡುವ ಟೆಂಡರಿಗೆ ಸಂಬಂಧಿಸಿದಂತೆ ಗುತ್ತಿಗೆದಾರರು 100 ಹಾಸಿಗೆಯ ಸಾಮರ್ಥ್ಯದ ಆಸ್ಪತ್ರೆ/ ಸಂಸ್ಥೆ/ಹಾಸ್ಟೇಲ್ ಇತರೆ ಸಂಸ್ಥೆಗಳಿಗೆ ಸಿದ್ದಪಡಿಸಿದ ಆಹಾರ ಸರಬರಾಜು ಮಾಡಿದ ಹಿಂದಿನ ಎರಡು (2) ವರ್ಷಗಳ ಅನುಭವ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

13. ಸಂಸ್ಥೆ ಹೆಸರಿನಲ್ಲಿ ಪಾನ್ ಕಾರ್ಡ್ ಹೊಂದಿರಬೇಕು, ಪ್ರತಿ ಲಗತ್ತಿಸುವುದು.

14. 2023-2024, 2024-2025 & 2025-2026 ನೇ ಸಾಲಿನ ಆಡಿಟ್ ವರದಿಯ ಬ್ಯಾಲೆನ್ಸ್ ಶೀಟ್ & ಖರ್ಚು ವೆಚ್ಚ ತ:ಖ್ತೆಗಳು Charterd Accountant ದೃಢೀಕೃತ ಪ್ರತಿ ಲಗತ್ತಿಸುವುದು.

15. ಸಿದ್ದಪಡಿಸಿದ ಪಥ್ಯಾಹಾರ ಮತ್ತು ಉತ್ತಮ ದರ್ಜೆಯ ಬ್ರೇಡ್ ಸರಬರಾಜು ಮಾಡಲು ಅಧಿಕೃತ

ಪರವಾನಿಗೆ ಪರವಾನಿಗೆ ಹೊಂದಿದವರಾಗಿರಬೇಕು ಈ ಸಂಬಂಧ 2026–2027 ನೇ ಸಾಲಿಗೆ ನಗರಸಭೆ/ಪುರಸಭೆ/ಮಹಾನಗರ ಪಾಲಿಕೆ/ನಗರ ಪಾಲಿಕೆ/ಪಟ್ಟಣ ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿಗಳಿಂದ ಅಥವಾ ಕೃಷಿ ಮಾರುಕಟ್ಟೆ ಸಮಿತಿಯಿಂದ ಪಡೆದಿರುವ ಪರವಾನಿಗೆ ಪತ್ರ (ಟ್ರೇಡ್ ಲೈಸನ್ಸ್) ಸಲ್ಲಿಸಬೇಕು. (2026–2027 ನೇ ಸಾಲಿಗೆ ಚಾಲ್ತಿಯಲ್ಲಿರಬೇಕು)

16. ಬಿಡ್ಡುದಾರರು ಹಿಂದಿನ 3 ವರ್ಷಗಳ Annual Turnover Certificate ನ್ನು ಸಲ್ಲಿಸುವುದು. (2023–2024, 2024–2025 & 2025–2026) ವಹಿವಾಟುನ ಸರಾಸರಿ ಮೊತ್ರವು ಟೆಂಡರ್ ಮೊತ್ತದ 1 ರಷ್ಟು ಮೊತ್ತಕ್ಕೆ ಸಮನಾಗಿ ಅಥವಾ ಹೆಚ್ಚಿರತಕ್ಕದ್ದು (ATTESTED Turnover Cetificate from Charterd Accountant with UDIN ಸಂಖ್ಯೆ ಹೊಂದಿರಬೇಕು)

**ಉದಾಹರಣೆ:**– ಟೆಂಡರ್ ಮೊತ್ತ ರೂ.40.00 ಲಕ್ಷಗಳು ಇದ್ದಲ್ಲಿ, ಈ ಕೆಳಕಂಡಂತೆ ಹಿಂದಿನ 3 ವರ್ಷಗಳ ಸರಾಸರಿ ವಾರ್ಷಿಕ ವಹಿವಾಟು ಕುರಿತು ಲೆಕ್ಕಾಚಾರ ಮಾಡಿಕೊಳ್ಳುವುದು.

| ಕ್ರ ಸಂ | ವರ್ಷ | ವಾರ್ಷಿಕ ವಹಿವಾಟು ರೂ. ಲಕ್ಷಗಳಲ್ಲಿ |
|---|---|---|
| 01 | 2023–2024 | 60.00 ಲಕ್ಷಗಳು |
| 02 | 2024–2025 | 70.00 ಲಕ್ಷಗಳು |
| 03 | 2025–2026 | 80.00 ಲಕ್ಷಗಳು |
| | **ಒಟ್ಟು ರೂ.** | **2,10,00,000/–ಲಕ್ಷಗಳು/3 ವರ್ಷಗಳು = ರೂ.70.00 ಲಕ್ಷಗಳು** |

17. ಯಶಸ್ವಿ ಬಿಡ್ಡುದಾರರಿಗೆ ಕಾರ್ಯಾದೇಶದ ಅವಧಿಯ ಅಂತ್ಯವರೆಗೂ ಯಾವುದೇ ಕಾರಣಕ್ಕೂ ಕಾರ್ಯಾದಾರಿತ ಭದ್ರತಾ ಮೊತ್ತವನ್ನು ಹಿಂತಿರುಗಿಸಲಾಗುವುದಿಲ್ಲ, ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
18. ಟೆಂಡರಿನಲ್ಲಿನ ದರಗಳನ್ನು ಅಂಗೀಕರಿಸುವ/ತಿರಸ್ಕರಿಸುವ ಅಧಿಕಾರವನ್ನು ಟೆಂಡರು ಸಮೀತಿ ಕಾಯ್ದಿರಿಸಿದೆ.
19. ಟೆಂಡರ್ ಅಂತಿಮಗೊಂಡ ನಂತರ ಯಶಸ್ವಿ ಟೆಂಡರ್‌ದಾರರ/ಸಂಸ್ಥೆ ಹಾಗೂ ಆಸ್ಪತ್ರೆಯ ಮುಖ್ಯಸ್ಥರ ನಡುವೆ ರೂ.500/– ಗಳ ಛಾಪಾ ಕಾಗದಲ್ಲಿ ಲಿಖಿತ ರೂಪದಲ್ಲಿ ಕರಾರನ್ನು ಮಾಡಿಕೊಳ್ಳುವುದು.
20. ಟೆಂಡರ್‌ದಾರರು ನೀಡಿರುವ ರಾಷ್ಟ್ರೀಕೃತ ಬ್ಯಾಂಕಿನಿಂದ ಟೆಂಡರ್ ಮೊತ್ತಕ್ಕೆ ಅನುಗುಣವಾಗಿ ಪಡೆದ ಬ್ಯಾಂಕ್ ಗ್ಯಾರಂಟಿಯ ನೈಜತೆಯನ್ನು ಸದರಿ ಬ್ಯಾಂಕಿಗೆ ಇ–ಮೇಲ್ ಮುಖಾಂತರ ಪತ್ರ ಬರೆದು ಪರಿಶೀಲಿಸಿ ನೈಜತೆ ಬಗ್ಗೆ ದೃಢೀಕರಿಸಿಕೊಳ್ಳತಕ್ಕದ್ದು.

**6. ಆರ್ಥಿಕ ಬಿಡ್‌ನಲ್ಲಿ ಸಲ್ಲಿಸಬೇಕಾದ ವಿವರಗಳು:–**

ಬಿಡ್ಡುದಾರರು ಟೆಂಡರ್ ಸಲ್ಲಿಸುವ ಕಾಲಮಿತಿಯಲ್ಲಿ ಮಾರುಕಟ್ಟೆ ಸಮೀಪದ ದರಗಳಿಗೆ ಅನುಗುಣವಾಗಿ ಮೊತ್ತವನ್ನು ನಮೂದಿಸಬೇಕು. ಟೆಂಡರ್ ದರಗಳು ಮಾರುಕಟ್ಟೆ ದರಗಳಿಂದ ಶೇ 5% ಕ್ಕಿಂತ ಹೆಚ್ಚು ಅಥವಾ ಕಡಿಮೆ ಇರಬಾರದು. ಸದರಿ ಟೆಂಡರ್‌ದಾರರು ಯಶಸ್ವಿ ಟೆಂಡರ್‌ದಾರರಾಗುತ್ತಾರೆ.

**7. ಇ.ಎಂ.ಡಿ. ಮೊತ್ತ:– 1,80,000.00 (ರೂ: ಒಂದು ಲಕ್ಷದ ಎಂಬತ್ತು ಸಾವಿರ)** ಅನುಬಂಧ–1 ರ ನಮೂನೆಯಲ್ಲಿ EMD DECLARATION ಸಹಿಯೊಂದಿಗೆ ಸಲ್ಲಿಸುವುದು.

8. ಕಾರ್ಯಾಧಾರಿತ ಭದ್ರತೆ:-

- ಯಶಸ್ವಿ ಟೆಂಡರ್‌ದಾರರು ಕಾರ್ಯಾಧಾರಿತ ಭದ್ರತೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ನಿಂದ ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ ಇವರ ಹೆಸರಿಗೆ ಸಲ್ಲಿಸಬೇಕು.
- ಯಶಸ್ವಿ ಬಿಡ್‌ದಾರರಿಗೆ ಕಾರ್ಯಾದೇಶದ ಅವಧಿಯ ಅಂತ್ಯದವರೆಗೆ ಯಾವುದೇ ಕಾರಣಕ್ಕೂ ಕಾರ್ಯಾದಾರಿತ ಭದ್ರತಾ ಮೊತ್ತವನ್ನು ಹಿಂತಿರುಗಿಸಿಲಾಗುವುದಿಲ್ಲ. ಹಾಗೂ ಇಲಾಖೆಯಲ್ಲಿರುವ ಅವಧಿಗೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
- **ಟೆಂಡರ್ ಅಂಗೀಕರಿಸಿದ ತರುವಾಯ ಸರಬರಾಜುದಾರರಿಂದ ಟೆಂಡರ್‌ನಲ್ಲಿ ನಮೂಸಿರುವ ಪದಾರ್ಥಗಳ ಒಟ್ಟು ಮೌಲ್ಯದ ಶೇ 7.5% ರಷ್ಟು ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಡಿಡಿ ಮುಖಾಂತರ ಭದ್ರತಾ ಠೇವಣಿಯನ್ನು ಆಯಾ ಸಂಸ್ಥೆಯ ಮುಖ್ಯಸ್ಥರ ಹೆಸರಿಗೆ ಪಡೆದು ಸಲ್ಲಿಸುವುದು.**

9. ಟೆಂಡರ್ ಸಲ್ಲಿಸುವಿಕೆ:-

- ಟೆಂಡರ್ ಸಲ್ಲಿಸಲು ನಿಗದಿಪಡಿಸಿರುವ ಅರ್ಹತೆ ಮತ್ತು ಅನುಭವಗಳು/ದಾಖಲಾತಿಗಳು ಇರತಕ್ಕದ್ದು.
- ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 26-06-2026 ಇ-ಪೋರ್ಟಲ್‌ನಲ್ಲಿ ನಿಗಧಿಪಡಿಸಿದಂತೆ. ಪ್ರಿ-ಬಿಡ್ ಸಭೆಯನ್ನು ಇ-ಪೋರ್ಟಲ್‌ನಲ್ಲಿ ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ ಇಲ್ಲಿ ನಿಗದಿಪಡಿಸಿಲಾಗಿದೆ. ಟೆಂಡರ್‌ದಾರರ ತಾಂತ್ರಿಕ ಲಕೋಟೆಗಳನ್ನು ಇ-ಪೋರ್ಟಲ್‌ನಲ್ಲಿ ನಿಗಧಿಪಡಿಸಿದಂತೆ ತೆರೆಯಲಾಗುವುದು. ಹಾಗೂ ಆರ್ಥಿಕ ಲಕೋಟೆ ತೆರೆಯುವ ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು. (ಟೆಂಡರ್ ತೆರೆಯುವ ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ).
- ಟೆಂಡರ್‌ಗೆ ನಿಗದಿಪಡಿಸಿರುವ ಪಥ್ಯಾಹಾರ ಸಾಮಾಗ್ರಿಗಳು ಹಾಗೂ ಸಿದ್ದಪಡಿಸಿದ ಪಥ್ಯಾಹಾರ ಮತ್ತು ಬ್ರೆಡ್ ಸರಬರಾಜು ಮಾಡಬೇಕಾದ ಸಾಮಾಗ್ರಿಗಳ ಪ್ರಮಾಣ ಬದಲಾವಣೆಗೆ ಒಳಪಟ್ಟಿರುತ್ತದೆ.
- ಟೆಂಡರ್ ಲಕೋಟೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿಯೇ ಸಲ್ಲಿಸಬೇಕು. ಮತ್ತು ಟೆಂಡರ್ ಡಾಕ್ಯೂಮೆಂಟ್‌ನಲ್ಲಿರುವ ಅರ್ಜಿ ನಮೂನೆಯನ್ನು (ಫಾರಂ-ಎ) ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಿ ತಾಂತ್ರಿಕ ದಾಖಲೆಗಳೊಂದಿಗೆ ಅಪ್‌ಲೋಡ್ ಮಾಡಬೇಕು ಹಾಗೂ ದರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನ ಊಟಿಚಿಟಿಛಿಚಿಟ ಭಿಜ ನಲ್ಲಿ ನಮೂದಿಸಿ ಆಪ್‌ಲೋಡ್ ಮಾಡಬೇಕು.
- ಏಜೆನ್ಸಿಯವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆರ್ಥಿಕ ಬಿಡ್‌ನಲ್ಲಿ ನಮೂದಿಸಿದ ದರಗಳನ್ನು ಮಾತ್ರ ಪರಿಗಣಿಸಲಾಗುವುದು. ಇತರೆ ಯಾವುದೇ ಅನುಬಂಧ/ನಮೂನೆಗಳು/ಪತ್ರಗಳು/ಮಾಧ್ಯಮಗಳ ಮೂಲಕ ಸಲ್ಲಿಸುವ ದರಗಳನ್ನು ಪರಿಗಣಿಸಲಾಗುವುದಿಲ್ಲ.

10 ಟೆಂಡರ್ ತೆರೆಯುವುದು ಮತ್ತು ಮೌಲ್ಯಮಾಪನ ಮಾಡುವುದು:-

- E-Procurement ಮೂಲಕ ಸ್ವೀಕೃತವಾಗುವ ತಾಂತ್ರಿಕ ಬಿಡ್‌ಗಳನ್ನು ತೆರೆದು ಪರಿಶೀಲಿಸಲಾಗುವುದು. ತಾಂತ್ರಿಕವಾಗಿ ಅರ್ಹವಿರುವ ಸಂಸ್ಥೆಗಳನ್ನು ಮಾತ್ರ **ಆರ್ಥಿಕ** ಬಿಡ್‌ಗಳನ್ನು ತೆರೆಯಲಾಗುವುದು.

**11. ಟೆಂಡರ್ ಅವಾರ್ಡ್ ಮಾಡುವುದು:-**

- ಟೆಂಡರ್‌ಗಳನ್ನು ಒಪ್ಪುವ/ತಿರಸ್ಕರಿಸುವ/ಬದಲಾವಣೆ ಮಾಡುವ/ಮುಂದೂಡುವ/ಟೆಂಡರ್ ನಿಬಂಧನೆಗಳನ್ನು ತಿದ್ದುಪಡಿ ಮಾಡುವ ಅಥವಾ ನಿಗಧಿಪಡಿಸಲಾದ ಕಾಲಮಿತಿಯನ್ನು ಬದಲಾವಣೆಗೊಳಿಸುವ ಅಧಿಕಾರ ಟೆಂಡರ್ ಆಹ್ವಾನಿಸಿರುವ ಪ್ರಾಧಿಕಾರದವರಾಗಿರುತ್ತದೆ.
- ಟೆಂಡರ್ ಅವಧಿಯು 2026-2027 ನೇ ಸಾಲಿನ ವರ್ಷದ ಅಂತ್ಯದವರೆಗೆ ಅಂದರೆ ದಿನಾಂಕ: 31-03-2027 ರವರೆಗೂ ಇಲಾಖೆ ತಿಳಿಸುವ ಅವಧಿಗೆ ಸಿದ್ದ ಪಡಿಸಿದ ಪಥ್ಯಾಹಾರ ಪೂರೈಸಲು ಟೆಂಡರ್‌ದಾರರು ಸಿದ್ದರಿರಬೇಕು. ಅನಗತ್ಯ ಕಾರಣಗಳನ್ನು ನೀಡಿ ಸರಬರಾಜಿನಿಂದ ಹಿಂದಕ್ಕೆ ಸರಿದಲ್ಲಿ ಏಜೆನ್ಸಿ ವಿರುದ್ಧ ಕಾನೂನಿನನ್ವಯ ಶಿಸ್ತುಕ್ರಮ ಕೈಗೊಳ್ಳಲಾಗುವುದು.
- ಟೆಂಡರ್‌ನಲ್ಲಿ ಅವಶ್ಯಕವಿರುವ ಎಲ್ಲಾ ಸಿದ್ದ ಪಡಿಸಿದ ಪಥ್ಯಾಹಾರ ಪದಾರ್ಥಗಳ ವಾರ್ಷಿಕ ಬೇಡಿಕೆಯ ಪ್ರಮಾಣಕ್ಕೆ ದರಗಳನ್ನು ಒಟ್ಟಾಗಿ ಕ್ರೋಢಿಕರಿಸಿ ಒಂದೇ ಮೌಲ್ಯವನ್ನು ಟೆಂಡರುದಾರರು ಟೆಂಡರಿನಲ್ಲಿ ನಮೂದಿಸತಕ್ಕದ್ದು. ಸದರಿ ಟೆಂಡರುದಾರರ ಪೈಕಿ ಕಡಿಮೆ ದರ ಸೂಚಿಸುವ ಸಂಸ್ಥೆಯನ್ನು ಎಲ್-1 ಎಂದು ಪರಿಗಣಿಸತಕ್ಕದ್ದು. ಟೆಂಡರುದಾರರು ಪಥ್ಯಾಹಾರ ಪದಾರ್ಥಗಳ (ವಾರ್ಷಿಕವಾಗಿ ಅನ್ವಯವಾಗುವಂತೆ) ಪ್ರತಿ ಯೂನಿಟ್‌ನ ದರಗಳನ್ನು ಟೆಂಡರಿನ **ಆರ್ಥಿಕ** ಬಿಡ್‌ನಲ್ಲಿ (Indicative ಆಗಿ) ನಮೂದಿಸತಕ್ಕದ್ದು. ಯಶಸ್ವಿ ಟೆಂಡರುದಾರರು ಪಥ್ಯಾಹಾರ ಪದಾರ್ಥಗಳನ್ನು ಸರಬರಾಜು ಮಾಡಿದ ಪ್ರಮಾಣಕ್ಕೆ ಸದರಿ ದರಗಳನ್ನು ಪ್ರತಿ ಮಾಹೆಯ ಬಿಲ್‌ನಲ್ಲಿ ನಮೂದಿಸಲು ಪರಿಗಣಿಸತಕ್ಕದ್ದು.
- ಟೆಂಡರ್ ಅಂತಿಮಗೊಳಿಸಿದ ನಂತರ ಟೆಂಡರ್‌ದಾರರು ಮತ್ತು ಆಡಳಿತ ವೈದ್ಯಾಧಿಕಾರಿಗಳು ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ ಅಧಿಕಾರಿಗಳ ಮಧ್ಯೆ ರೂ.500/- ಗಳ ಛಾಪಾ ಕಾಗದದಲ್ಲಿ ಕರಾರನ್ನು ಮಾಡಿಕೊಳ್ಳುವುದು.

**12. ಟೆಂಡರ್ ಗುತ್ತಿಗೆಯ ಕರಾರು ಒಪ್ಪಂದವನ್ನು ಸಹಿ ಮಾಡುವುದು:-**

- ಯಶಸ್ವಿ ಟೆಂಡರ್‌ದಾರರಿಗೆ ಕಾರ್ಯಾದೇಶ ನೀಡಲಾಗುವುದು, ಕಾರ್ಯಾದೇಶ ಪಡೆದ ನಂತರ ಇಲಾಖೆಯೊಂದಿಗೆ ನಿಗದಿತ ನಮೂನೆಯಲ್ಲಿ ಟೆಂಡರ್ ನಿಬಂಧನೆಗಳೊಂದಿಗೆ ಹಾಗೂ ಪ್ರತ್ಯೇಕವಾಗಿ ವಿಧಿಸಬಹುದಾದ ಷರತ್ತುಗಳನ್ನೊಳಗೊಂಡ ಕರಾರು ಪತ್ರಕ್ಕೆ ಸಹಿ ಮಾಡತಕ್ಕದ್ದು. ಸದರಿ ಕರಾರು ಪತ್ರದಲ್ಲಿ ಒಪ್ಪಿರುವ ಗುಣಮಟ್ಟ ಮತ್ತು ದರಗಳಂತೆ ನಿಗದಿತ ಸಮಯದೊಳಗೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಏಜೆನ್ಸಿಯವರು ಬದ್ಧರಾಗಿರುತ್ತಾರೆ.

**13.ಟೆಂಡರ್‌ದಾರರಿಗೆ ಸೂಚನೆ ಮತ್ತು ಷರತ್ತುಗಳು ಹಾಗೂ ಜವಾಬ್ದಾರಿಗಳು:-**

- ಟೆಂಡರ್‌ದಾರರು ಆರ್ಥಿಕ ಲಕೋಟೆಯಲ್ಲಿ ಸಾಮಾಗ್ರಿಗಳಿಗೆ ನಮೂದಿಸುವ ದರಗಳಲ್ಲಿ ಜಿ.ಎಸ್.ಟಿ. ಹೊರತುಪಡಿಸಿ ಎಲ್ಲಾ ರೀತಿಯ ತೆರಿಗೆ, ಸಾಮಾಗ್ರಿಗಳ ಖರೀದಿ ವೆಚ್ಚ, ಸಾಗಾಣಿಕೆ ವೆಚ್ಚ, ಪ್ಯಾಕಿಂಗ್ ವೆಚ್ಚ, ವಾಹನ ವಾಡಿಗೆ, ಕಾರ್ಮಿಕರ ವೆಚ್ಚ ಇತ್ಯಾದಿಗಳನ್ನು ಒಳಗೊಂಡಿರಬೇಕು. ಪ್ರತ್ಯೇಕವಾಗಿ ಯಾವುದೇ ರೀತಿಯ ವೆಚ್ಚಗಳನ್ನು ಪಾವತಿಸಲಾಗುವುದಿಲ್ಲ.

- ಟೆಂಡರ್‌ದಾರರು ನಮೂದಿಸುವ ದರಗಳು ಮಾರುಕಟ್ಟೆ ದರಗಳಿಗೆ ವಾಸ್ತವಿಕವಾಗಿರಬೇಕು ಹಾಗೂ ಟೆಂಡರ್ ಪಡೆಯುವ ಉದ್ದೇಶಕ್ಕಾಗಿಯೇ ಅವಾಸ್ತವಿಕ ದರಗಳನ್ನು ನಮೂದಿಸತಕ್ಕದ್ದಲ್ಲ. ಈ ಸಂಬಂಧ ಪ್ರಸ್ತುತ: ಮಾರುಕಟ್ಟೆ ದರಗಳನ್ನು ಪಡೆದುಕೊಂಡು ಪರಿಶೀಲಿಸಲಾಗುವುದು. ಟೆಂಡರ್ ದರಗಳು ಮಾರುಕಟ್ಟಿ ದರಗಳಿಂದ ಶೇ 5% ಕ್ಕಿಂತ ಹೆಚ್ಚು ಅಥವಾ ಕಡಿಮೆ ಇರಬಾರದು.
- ಈ ವಿಷಯವಾಗಿ ಟೆಂಡರ್ ಕರೆದಿರುವ ಪ್ರಾಧಿಕಾರವು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿದ್ದು, ಟೆಂಡರ್ ಪ್ರಾಧಿಕಾರದ ತೀರ್ಮಾನಕ್ಕೆ ಏಜೆನ್ಸಿಯವರು ಬದ್ಧವಾಗಿರಬೇಕು.
- ಸರಬರಾಜು ಮಾಡುವ ಎಲ್ಲಾ ಪದಾರ್ಥಗಳು ಕಡ್ಡಾಯವಾಗಿ ಉತ್ತಮ ಗುಣಮಟ್ಟ ಹೊಂದಿದ್ದು, ಸ್ವಚ್ಚಗೊಳಿಸಿದ/ಶುಚಿಯಾದ ಪದಾರ್ಥಗಳಾಗಿರತಕ್ಕದ್ದು. ಪ್ರತಿ ತಿಂಗಳು ಬೇಡಿಕೆ ಪಟ್ಟಿಯಂತೆ ಸಾಮಾಗ್ರಿಗಳನ್ನು ಸಂಬಂಧಿಸಿದ ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ ರವರಿಂದ ದಾಸ್ತಾನು ಪಡೆದುಕೊಂಡಿರುವ ಬಗ್ಗೆ ದೃಢೀಕರಣ ಪಡೆದು ಬಿಲ್ಲುಗಳನ್ನು ಸಂಬಂಧಿಸಿದ ಆಡಳಿತ ವೈದ್ಯಾಧಿಕಾರಿಗಳು ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ ಇಲ್ಲಿ ಸಲ್ಲಿಸಬೇಕು. ಸಂಬಂಧಿಸಿದ ಕಛೇರಿಯಿಂದ ಮೇಲು ಸಹಿ ಪಡೆದ ನಂತರದಲ್ಲಿ ಅನುದಾನ ಲಭ್ಯತೆ ಆದರಿಸಿ ಬಿಲ್ಲುಗಳನ್ನು ಪಾವತಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು.
- ಅನುದಾನ ಅಲಭ್ಯತೆ ಮುಂತಾದ ಕಾರಣಗಳಿಂದ ಹಣ ಪಾವತಿಸುವುದು ವಿಳಂಬವಾದರೂ ಸಹ ಆಹಾರ ಮತ್ತು ಇತರೆ ಸಾಮಾಗ್ರಿಗಳ ಪೂರೈಕೆ ಮಾಡಲು ಸಾಮರ್ಥ್ಯ ಹೊಂದಿರಬೇಕು. ಒಂದು ವೇಳೆ ಆಹಾರ ಮತ್ತು ಇತರೆ ಸಾಮಾಗ್ರಿಗಳ ಪೂರೈಕೆಗೆ ವಿಳಂಬ ಮಾಡಿದ್ದಲ್ಲಿ ಪಥ್ಯಾಹಾರ ಪದಾರ್ಥಗಳು/ಸಿದ್ದಪಡಿಸಿದ ಪಥ್ಯಾಹಾರ/ಬ್ರೆಡ್ ಪೂರೈಸಲು ತುಂಬಾ ತೊಂದರೆಯಾಗಲಿದ್ದು, ಈ ರೀತಿ ಮಾಡುವ ಏಜೆನ್ಸಿಗಳ ಇ.ಎಂ.ಡಿ/ಕಾರ್ಯಾಧಾರಿತ ಭದ್ರತೆ ಬಾಬ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ನಿಯಮಾನುಸಾರ ಸದರಿ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗುವುದು.
- ಬೇಡಿಕೆ ಪಟ್ಟಿಯಲ್ಲಿ ಒಂದು ವೇಳೆ ಟೆಂಡರ್ ನಲ್ಲಿ ನಮೂದಿಸದ ಅತ್ಯಗತ್ಯ ಸಾಮಾಗ್ರಿಗಳನ್ನು ಪೂರೈಸಲು ತಿಳಿಸಿದ್ದಲ್ಲಿ ಸಾಮಾಗ್ರಿಗಳನ್ನು ಒಖಕ ದರಗಳಲ್ಲಿ ಸರಬರಾಜು ಮಾಡಲು ಬದ್ಧರಿರಬೇಕು.
- ಅತ್ಯುತ್ತಮ ಗುಣಮಟ್ಟದ ಸಾಮಾಗ್ರಿಗಳನ್ನೇ ಸರಬರಾಜು ಮಾಡಬೇಕು. ಕಳಪೆ ಗುಣಮಟ್ಟದ ಸಾಮಾಗ್ರಿಗಳನ್ನು ಸರಬರಾಜು ಮಾಡಿದ್ದಲ್ಲಿ ಆದೇಶವನ್ನು ರದ್ದುಪಡಿಸಿ ಸದರಿ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲು ಮತ್ತು ಇ.ಎಂ.ಡಿ/ಕಾರ್ಯಧಾರಿತ ಭದ್ರತೆ ಬಾಬ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.
- ಒಂದು ವೇಳೆ ಆಸ್ಪತ್ರೆಗಳಿಗೆ ಸರಬರಾಜು ಮಾಡಿದ ಯಾವುದೇ ಪಥ್ಯಾಹಾರ ಪದಾರ್ಥಗಳು/ಸಿದ್ಧಪಡಿಸಿದ ಪಥ್ಯಾಹಾರ/ಬ್ರೆಡ್ ಗುಣಮಟ್ಟ ಸರಿಯಿಲ್ಲವೆಂದು ಕಂಡುಬಂದಲ್ಲಿ, ಅಂತಹ ಆಹಾರ ಪದಾರ್ಥಗಳನ್ನು ತಕ್ಷಣವೇ ಟೆಂಡರ್‌ದಾರರು ಸ್ವಂತ ಖರ್ಚಿನಲ್ಲಿ ಬದಲಾಯಿಸಿಕೊಡತಕ್ಕದ್ದು.
- ಆಹಾರ ಸಾಮಾಗ್ರಿಗಳನ್ನು ಕನಿಷ್ಠ ಪ್ರಮಾಣದಳತೆಯ ಪ್ಯಾಕೆಟ್‌ಗಳಲ್ಲಿ ಅಂಗೀಕೃತ ಟೆಂಡರ್‌ದಾರರು ಸರಬರಾಜು ಮಾಡಬೇಕು. ಏಜೆನ್ಸಿಯವರು ಸಾಮಾಗ್ರಿಗಳನ್ನು ಆಸ್ಪತ್ರೆಗಳಿಗೆ ಸರಬರಾಜು ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ಆಸ್ಪತ್ರೆಯ ವೈದ್ಯಾಧಿಕಾರಿಗಳು ಹಾಜರಿದ್ದು, ಪಥ್ಯಾಹಾರ ಪದಾರ್ಥಗಳು /ಸಿದ್ದಪಡಿಸಿದ ಪಥ್ಯಾಹಾರ/ಬ್ರೆಡ್ ಗುಣಮಟ್ಟ ಹಾಗೂ ಪ್ರಮಾಣಗಳನ್ನು ಖಚಿತಪಡಿಸಿಕೊಳ್ಳಬೇಕು.

- ಒಂದು ವೇಳೆ ಸರಬರಾಜುದಾರ ಸಂಸ್ಥೆಯು ಕಪ್ಪು ಪಟ್ಟಿಗೆ ಈ ಹಿಂದೆ ಅಥವಾ ನಂತರದಲ್ಲಿ ಸೇರಿರುವುದು ಕಂಡು ಬಂದಲ್ಲಿ ಸರಬರಾಜು ಆದೇಶವನ್ನು ನೀಡಿದ್ದರೂ ರದ್ದುಪಡಿಸಿ ಇ.ಎಂ.ಡಿ. ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
- ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಪ್‌ಲೋಡ್ ಮಾಡುವ ದಾಖಲಾತಿಗಳ ಸತ್ಯಾಸತ್ಯತೆ ತಿಳಿಯುವ ಸಂಬಂಧ ಅಪ್‌ಲೋಡ್ ಮಾಡಲಾದ ಎಲ್ಲಾ ದಾಖಲಾತಿಗಳ ಝೆರಾಕ್ಸ್ ಪ್ರತಿಗಳನ್ನು ನೋಟರಿಯಿಂದ ಅಥವಾ ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಟೆಂಡರ್ ಸಲ್ಲಿಸಲು ನಿಗಧಿಪಡಿಸಲಾಗಿರುವ ಅಂತಿಮ ದಿನದ ಮರುದಿನ ಈ ಕಛೇರಿಗೆ ಸಲ್ಲಿಸಬೇಕು. ಹಾಗೂ ಟೆಂಡರ್ ಅಂಗೀಕಾರ ಪ್ರಾಧಿಕಾರವು ತಿಳಿಸುವ ದಿನಾಂಕದಂದು ಮೂಲ ದಾಖಲಾತಿಗಳನ್ನು ಪರಿಶೀಲನೆ ಹಾಜರುಪಡಿಸಬೇಕು.
- ಟೆಂಡರ್‌ದಾರನು ತಾನು ಪಡೆದ ಗುತ್ತಿಗೆಯನ್ನು ಬೇರೆಯವರಿಗೆ ವರ್ಗಾಯಿಸಬಾರದು ಮತ್ತು ಉಪಗುತ್ತಿಗೆ ನೀಡಬಾರದು. ಇದು ಟೆಂಡರ್ ನಿಬಂಧನೆಯ ಉಲ್ಲಂಘನೆಯಾಗಿರುತ್ತದೆ.
- ಅಪೂರ್ಣ ಮಾಹಿತಿ ಅಥವಾ ತಪ್ಪು ಮಾಹಿತಿ ಇರುವ ಟೆಂಡರ್‌ಗಳನ್ನು ಅಂಗೀಕರಿಸಲಾಗುವುದಿಲ್ಲ.
- ಯಶಸ್ವಿ ಟೆಂಡರ್‌ದಾರರಿಗೆ ಹಣವನ್ನು ಪಾವತಿಸುವಾಗ ಸರ್ಕಾರದ ನಿಯಮಾವಳಿಯಂತೆ ಆದಾಯ ತೆರಿಗೆ/ಮಾರಾಟ ತೆರಿಗೆ/ಟಿ.ಡಿ.ಎಸ್/ಜಿ.ಎಸ್.ಟಿ ಇತ್ಯಾದಿ ಕಟಾವು ಮಾಡಿ ಉಳಿದ ಬಾಬ್ತನ್ನು ಪಾವತಿಸಲಾಗುವುದು.
- ಟೆಂಡರ್ ಕರೆದ ಯಾವುದೇ ಸಾಮಾಗ್ರಿಗಳಿಗೆ ಬೇಡಿಕೆ ನೀಡುವ ಅಥವಾ ನೀಡದೇ ಇರುವ ಅಧಿಕಾರ ಇಲಾಖೆಗೆ ಇರುತ್ತದೆ. ಸಾಮಾಗ್ರಿಗಳ ಬೇಡಿಕೆ ಪ್ರಮಾಣವು ಸಂದರ್ಭನುಸಾರ ಹೆಚ್ಚು ಅಥವಾ ಕಡಿಮೆ ಆಗುತ್ತದೆ ಮತ್ತು ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತದಲ್ಲಿ ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ.
- ಟೆಂಡರ್ ನಿಗಧಿಪಡಿಸಿದ ದಿನಾಂಕಗಳು ಯಾವುದೇ ಸಾರ್ವತ್ರಿಕ ರಜಾ ದಿನವಾದಲ್ಲಿ ಆ ದಿನವನ್ನು ಮಾರನೆಯ ಕೆಲಸದ ದಿನವೆಂದು ತಿಳಿಯತಕ್ಕದ್ದು.
- ಟೆಂಡರ್ ನಿಬಂಧನೆಗಳನ್ನೊಳಗೊಂಡಂತೆ ಸರಬರಾಜು ಆದೇಶ ನೀಡುವ ಸಂದರ್ಭದಲ್ಲಿ ಇಲಾಖೆ ವಿಧಿಸುವ ಷರತ್ತುಗಳಿಗೆ ಏಜೆನ್ಸಿಯವರ ಬದ್ಧರಾಗಿರುಬೇಕು.
- ಸದರಿ ಟೆಂಡರ್ ವಿಷಯದಲ್ಲಿ ಯಾವುದೇ ವ್ಯಾಜ್ಯವಿದ್ದಲ್ಲಿ ಸ್ಥಳಿಯ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬಗೆಹರಿಸಿಕೊಳ್ಳಲು ಸಿದ್ಧರಿರಬೇಕು.
- ಈ ಮೇಲಿನ ಷರತ್ತುಗಳನ್ನು ಹೊರತುಪಡಿಸಿ ಉಳಿದಂತೆ ಕೆ.ಟಿ.ಪಿ.ಪಿ ಆಕ್ಟ್‌ಗಳಲ್ಲಿರುವ ನಿಯಮಗಳು, ಸರ್ಕಾರ/ಇಲಾಖೆ ಹೊರಡಿಸಿರುವ/ಹೊರಡಿಸುವ ಆದೇಶಗಳು ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ನಿಯಮಗಳು ಅನ್ವಯವಾಗುತ್ತವೆ.

ಆಡಳಿತ ವೈದ್ಯಾಧಿಕಾರಿಗಳು
ತಾಲೂಕಾ ಸಾರ್ವಜನಿಕ ಆಸ್ಪತ್ರೆ ಜಮಖಂಡಿ
ಜಿ: ಬಾಗಲಕೋಟೆ

# ಟೆಂಡರ್ ಫಾರಂ–ಎ ತಾಂತ್ರಿಕ ದಾಖಲಾತಿಗಳು
## ಇ–ಕಖಔಅಗಖಇಒಇಓಖ ಖಇಓಆಇಖ

ಇವರಿಗೆ,

**ಆಡಳಿತ ವೈದ್ಯಾಧಿಕಾರಿಗಳು**
**ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಜಮಖಂಡಿ**

ಮಾನ್ಯರೇ,

ವಿಷಯ:–2026–2027 ನೇ ಸಾಲಿಗೆ ಪಥ್ಯಾಹಾರ ಸಾಮಾಗ್ರಿಗಳು ಹಾಗೂ ಸಿದ್ದಪಡಿಸಿದ ಪಥ್ಯಾಹಾರ (ಅನ್ನ ಸಾಂಬರ) ಮತ್ತು ಬ್ರೆಡ್ ಸಾಮಾಗ್ರಿಗಳನ್ನು ಪೂರೈಕೆ ಮಾಡಲು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸುವ ಬಗ್ಗೆ.

| ಕ್ರ ಸಂ | ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹತೆಗೆ ಅಗ್ಯವಿರುವ ದೃಢೀಕೃತ ದಾಖಲಾತಿಗಳ ವಿವರ | ಲಗತ್ತಿಸಿರುವ ವಿವರ |
|---|---|---|
| 01 | ಟೆಂಡರ್ ಫಾರಂ–ಎ ತಾಂತ್ರಿಕ ದಾಖಲಾತಿಗಳ ಅರ್ಜಿ | ಲಗತ್ತಿಸಿದೆ/ಲಗತ್ತಿಸಿಲ್ಲ |
| 02 | ಒಂದು ವರ್ಷಕ್ಕೆ ಬೇಕಾದ ಪಥ್ಯಾಹಾರ ಸಾಮಾಗ್ರಿಗಳು/ಸಿದ್ದಪಡಿಸಿದ ಆಹಾರ ಪದಾರ್ಥಗಳ ಒಟ್ಟು ಮೌಲ್ಯಕ್ಕೆ (ಟೆಂಡರ್ ಮೊತ್ತಕ್ಕೆ) ಬೇಕಾಗುವ ಇ.ಎಂ.ಡಿ. ಮೊತ್ತವನ್ನು ಸಲ್ಲಿಸಬೇಕು. | ಲಗತ್ತಿಸಿದೆ/ಲಗತ್ತಿಸಿಲ್ಲ |
| 03 | ಜಿ.ಎಸ್.ಟಿ. ನೋಂದಣಿ ಪ್ರಮಾಣ ಪತ್ರ ಹಾಗೂ ಟೆಂಡರುದಾರರ ಸಂಸ್ಥೆಯಿಂದ ಜಿ.ಎಸ್.ಟಿ. ಪಾವತಿಸಿದ ಹಿಂದಿನ 3 ವರ್ಷಗಳ (3ಬಿ ರಿರ್ಟನ್ಸ್) (2022–2023, 2023–2024 & 2024–2025) ಸಲ್ಲಿಸುವುದು. | ಲಗತ್ತಿಸಿದೆ/ಲಗತ್ತಿಸಿಲ್ಲ |
| 04 | ಭಾರತ ಸರ್ಕಾರದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಈಖಖಂಋ (Food Safety and Standards Authority of India) ದಿಂದ ಪಡೆದ ಹಾಗೂ 2026–2027 ನೇ ಸಾಲಿಗೆ ಚಾಲ್ತಿಯಲ್ಲಿರುವ ಪರವಾನಿಗೆ ಹೊಂದಿರತಕ್ಕದ್ದು (ದೃಢೀಕೃತ ಪ್ರತಿ ಸಲ್ಲಿಸುವುದು) | ಲಗತ್ತಿಸಿದೆ/ಲಗತ್ತಿಸಿಲ್ಲ |
| 05 | ಹಿಂದಿನ 3 ವರ್ಷಗಳ ಆದಾಯ ತೆರಿಗೆ ಪಾವತಿಸಿದ ದಾಖಲೆಗಳನ್ನು | |

| | | |
|---|---|---|
| | (2022–2023, 2023–2024 & 2024– 2025) (ಅಸೆಸ್‌ಮೆಂಟ್ ವರ್ಷ) ಸಲ್ಲಿಸುವುದು. | ಲಗತ್ತಿಸಿದೆ/ಲಗತ್ತಿಸಿಲ್ಲ |
| 06 | ಚಾಲ್ತಿಯಲ್ಲಿರುವ ಬೇಕರಿ ಉದ್ದಿಮೆ ಪರವಾನಗೆ ದೃಢೀಕರಣ ಪತ್ರ (ಬ್ರೆಡ್ ಸರಬರಾಜುದಾರರಿಗೆ ಮಾತ್ರ) ಸಲ್ಲಿಸುವುದು. | ಲಗತ್ತಿಸಿದೆ/ಲಗತ್ತಿಸಿಲ್ಲ |
| 07 | ಟೆಂಡರ್ ಮೌಲ್ಯದ ಶೇ 5% ರಷ್ಟಕ್ಕೆ ಕಡಿಮೆ ಇಲ್ಲದ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಬ್ಯಾಂಕ್ ಗ್ಯಾರಂಟಿ ಸಲ್ಲಿಸತಕ್ಕದ್ದು. | ಲಗತ್ತಿಸಿದೆ/ಲಗತ್ತಿಸಿಲ್ಲ |
| 08 | ಚಾಲ್ತಿಯಲ್ಲಿರುವ ಉದ್ದಿಮೆ ಪರವಾನಗೆ ಪ್ರಮಾಣ ಪತ್ರ. | ಲಗತ್ತಿಸಿದೆ/ಲಗತ್ತಿಸಿಲ್ಲ |
| 09 | ಟೆಂಡರ್‌ದಾರರು ಕಪ್ಪುಪಟ್ಟಿಗೆ ಸೇರಿಲ್ಲವೆಂದು ನೀಡಿರುವ ಸ್ವಯಂ ದೃಢೀಕರಣ ಪತ್ರ. | ಲಗತ್ತಿಸಿದೆ/ಲಗತ್ತಿಸಿಲ್ಲ |
| 10 | ಪ್ರಸ್ತುತ: ಸಾಲಿನಲ್ಲಿ ಚಾಲ್ತಿಯಲ್ಲಿರುವ ಕ್ಯಾಟರಿಂಗ್ ಉದ್ದಿಮೆ ಪರವಾನಗಿ ಪತ್ರ (ಸಿದ್ದಪಡಿಸಿದ ಪಥ್ಯಾಹಾರ ಸರಬರಾಜುದಾರರಿಗೆ ಮಾತ್ರ) ಸಲ್ಲಿಸುವುದು. | ಲಗತ್ತಿಸಿದೆ/ಲಗತ್ತಿಸಿಲ್ಲ |
| 11 | ಸರಕಾರಿ ಸ್ವಾಮ್ಯದ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ, ಸಹಕಾರಿ ಸಂಘಗಳ ಮಹಾ ನಿಬಂಧಕರಿಂದ ಅಥವಾ ಸಕ್ಷಮ ಪ್ರಾಧಿಕಾರದಿಂದ ಪಡೆದ **ಆರ್ಥಿಕ** ಸಾಮರ್ಥ್ಯತಾ ಪ್ರಮಾಣ ಪತ್ರ (ಸದರಿ ಪ್ರಮಾಣ ಪತ್ರವನ್ನು ಟೆಂಡರ್ ಅರ್ಜಿ ಸಲ್ಲಿಸುವ ಆಯಾ **ಆರ್ಥಿಕ** ವರ್ಷದಲ್ಲಿ ಪಡೆದಿರತಕ್ಕದ್ದು) | ಲಗತ್ತಿಸಿದೆ/ಲಗತ್ತಿಸಿಲ್ಲ |
| 12 | ಸಿದ್ದಪಡಿಸಿದ ಪಥ್ಯಾಹಾರ ಸರಬರಾಜು ಮಾಡುವ ಟೆಂಡರಿಗೆ ಸಂಬಂಧಿಸಿದಂತೆ ಗುತ್ತಿಗೆದಾರರು 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ/ಸಂಸ್ಥೆ/ಹಾಸ್ಟೇಲ್ ಇತರೆ ಸಂಸ್ಥೆಗಳಿಗೆ ಸಿದ್ದಪಡಿಸಿದ ಆಹಾರ ಸರಬರಾಜು ಮಾಡಿದ ಹಿಂದಿನ ಎರಡು (2) ವರ್ಷಗಳ ಅನುಭವ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು. | ಲಗತ್ತಿಸಿದೆ/ಲಗತ್ತಿಸಿಲ್ಲ |
| 13 | ಸಂಸ್ಥೆಯ ಹೆಸರಿನಲ್ಲಿ ಪಾನ್ ಕಾರ್ಡ್ ಹೊಂದಿರಬೇಕು ಪ್ರತಿ ಲಗತ್ತಿಸುವುದು. | ಲಗತ್ತಿಸಿದೆ/ಲಗತ್ತಿಸಿಲ್ಲ |
| 14 | 2023–2024, 2024–2025 & 2025–2026 ನೇ ಸಾಲಿನ ಅಡಿಟ್ ವರದಿಯ ಬ್ಯಾಲೆನ್ಸ್ ಶೀಟ್ & ಖರ್ಚು ವೆಚ್ಚ ತ:ಖ್ತೆಗಳು Charterd Accountant ದೃಢೀಕೃತ ಪ್ರತಿ ಲಗತ್ತಿಸುವುದು. | ಲಗತ್ತಿಸಿದೆ/ಲಗತ್ತಿಸಿಲ್ಲ |
| 15 | ಪಥ್ಯಾಹಾರ ಸಾಮಾಗ್ರಿಗಳನ್ನು ಮತ್ತು ಸಿದ್ದಪಡಿಸಿದ ಪಥ್ಯಾಹಾರ ಮತ್ತು ಉತ್ತಮ ದರ್ಜೆಯ ಬ್ರೆಡ್ ಸರಬರಾಜು ಮಾಡಲು ಅಧಿಕೃತ ಪರವಾನಿಗೆ ಹೊಂದಿದವರಾಗಿರಬೇಕು. ಈ ಸಂಬಂಧ 2026–2027 ನೇ ಸಾಲಿಗೆ ನಗರಸಭೆ/ಪುರಸಭೆ/ ಮಹಾನಗರ ಪಾಲಿಕೆ/ನಗರ ಪಾಲಿಕೆ/ಪಟ್ಟಣ ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿಗಳಿಂದ ಅಥವಾ ಕೃಷಿ ಮಾರುಕಟ್ಟೆ ಸಮಿತಿಯಿಂದ ಪಡೆದಿರುವ ಪರವಾನಿಗೆ ಪತ್ರ (ಟ್ರೇಡ್ ಲೈಸನ್ಸ್) ಸಲ್ಲಿಸಬೇಕು. (2026–2027 ನೇ ಸಾಲಿಗೆ ಚಾಲ್ತಿಯಲ್ಲಿರಬೇಕು) | ಲಗತ್ತಿಸಿದೆ/ಲಗತ್ತಿಸಿಲ್ಲ |
| | ಬಿಡ್ಡುದಾರರು ಹಿಂದಿನ 3 ವರ್ಷಗಳ Annual Turnover Certificat | |

| | | |
|---|---|---|
| 16 | ನ್ನು ಸಲ್ಲಿಸುವುದು. (2023–2024, 2024–2025 & 2025–2026) ವಹಿವಾಟಿನ ಸರಾಸರಿ ಮೊತ್ತವು ಟೆಂಡರ್ ಮೊತ್ತದ 1 ರಷ್ಟು ಮೊತ್ತಕ್ಕೆ ಸಮನಾಗಿ ಅಥವಾ ಹೆಚ್ಚಿರತಕ್ಕದ್ದು (ATTESTED Turnover Cetificate From Charterd Accountant With UDIN ಸಂಖ್ಯೆ ಹೊಂದಿರಬೇಕು) | ಲಗತ್ತಿಸಿದೆ/ಲಗತ್ತಿಸಿಲ್ಲ |
| 17 | ಟೆಂಡರ್ ಏಜೆನ್ಸಿಯು/ಸಂಸ್ಥೆ/ಕಂಪನಿ/ಪಾಲುದಾರ ಮಾಲೀಕತ್ವ ಹೊಂದಿದ್ದಲ್ಲಿ, ಕೋ–ಆಪರೇಷನ್ ಸೊಸೈಟಿ ಕಾಯ್ದೆ ಅಥವಾ ಸರ್ಕಾರೇತರ ಸಂಸ್ಥೆಯಾಗಿರುವ ಬಗ್ಗೆ ಕಾನೂನಿನಡಿ ನೋಂದಣಿಯಾಗಿರಬೇಕು ಹಾಗೂ ಈ ಸಂಬಂಧ ಅಗತ್ಯ ದಾಖಲಾತಿ ಸಲ್ಲಿಸಬೇಕು. (ಏಕವ್ಯಕ್ತಿ ಮಾಲೀಕತ್ವದ ಸಂಸ್ಥೆಗೆ ಇದು ಅನ್ವಯಿಸುವುದಿಲ್ಲ) | ಲಗತ್ತಿಸಿದೆ/ಲಗತ್ತಿಸಿಲ್ಲ |
| 18 | UPLOAD THE FOOD SAMPLE VERIFICATION ACKNOWLEDGEMENT LETTER FROM DEPARTMENT | ಲಗತ್ತಿಸಿದೆ/ಲಗತ್ತಿಸಿಲ್ಲ |

ದಿನಾಂಕ: 12.06.2026 ರ ಟೆಂಡರ್ ಪ್ರಕಟಣೆಯಲ್ಲಿನ ಎಲ್ಲಾ ಷರತ್ತುಗಳನ್ನು ಒಪ್ಪಿ ಟೆಂಡರ್ ಸಲ್ಲಿಸಿರುತ್ತೇವೆ. ಮೇಲೆ ಕೇಳಲಾಗಿರುವ ತಾಂತ್ರಿಕ ದಾಖಲಾತಿಗಳ ಮೂಲ ಪ್ರತಿಗಳನ್ನು ಟೆಂಡರ್ ಮೂಲ ಲಕೋಟೆಗಳನ್ನು ತೆರೆಯುವ ಸಮಯದಲ್ಲಿ ಹಾಜರುಪಡಿಸಲು ಒಪ್ಪಿರುತ್ತೇವೆ. ಒದಗಿಸಿರುವ ಮಾಹಿತಿ ಹಾಗೂ ದಾಖಲೆಗಳು ಸುಳ್ಳೆಂದು ಕಂಡುಬಂದಲ್ಲಿ ಸಂಸ್ಥೆಯನ್ನು ಕಪ್ಪು ಪಟ್ಟಿಯಲ್ಲಿ ಸೇರಿಸುವ ಕ್ರಮವನ್ನೊಳಗೊಂಡಂತೆ ಇನ್ನಿತರೇ ಯಾವುದೇ ಕಾನೂನು ಕ್ರಮಕ್ಕೆ ಒಳಪಡಲು ಒಪ್ಪಿರುತ್ತೇವೆ.

ಸ್ಥಳ:–
ದಿನಾಂಕ:–

ಸಹಿ/–
ಟೆಂಡರ್‌ದಾರರ ಹೆಸರು ಮತ್ತು ಮೊಹರು

# Financial Bid
# Group-A
# (DIET)
# (ONLY FOR REFERENCE PURPOSE NOT UPLOADING)
## **ಸಿದ್ದಪಡಿಸಿದ ಪಥ್ಯಾಹಾರ**–Ready Food

| **Sl No** | **Name of articles** | **Unit** | **Rate in figures** | **Rste in words** |
|---|---|---|---|---|
| 1 | ಸಿದ್ದಪಡಿಸಿದ ಊಟ (2–ಚಪಾತಿ/ರೊಟ್ಟಿ, ಒಂದು ತರಹ ಪಲ್ಯ, ಅನ್ನ ಮತ್ತು ಸಾಂಬಾರ (ತರಕಾರಿ & ಬೆಳೆ ಮಿಶ್ರಿತ) | 1 | | |
| 3 | ಟೀ | 1 | | |
| 4 | ಬಾಳೆಹಣ್ಣು | 1 | | |
| 5 | ಪ್ರಥಮ ದರ್ಜೆ ಬ್ರೆಡ್ | 3–**Slice** | | |
| 8 | ಬೇಯಿಸಿದ ಕೋಳಿ ಮೊಟ್ಟೆ | 1 | | |
| ಒಟ್ಟು ಮೊತ್ತ | | | | |

ಗುತ್ತಿಗೆದಾರರ ಸಹಿ ಮತ್ತು ಮೊಹರು

ಸ್ಥಳ:
ದಿನಾಂಕ:

**Financial Bid**
**Group-B**
**(BREAD)**
(ONLY FOR REFERENCE PURPOSE NOT UPLOADING)

| Sl. No. | Name of the Item | Unit | Probable quantity required | Rate in figures | Rate in words |
|---|---|---|---|---|---|
| 1 | | | | | |

ಗುತ್ತಿಗೆದಾರರ ಸಹಿ ಮತ್ತು ಮೊಹರು

ಸ್ಥಳ:
ದಿನಾಂಕ:

# ಅನುಬಂಧ–01

# EMD Declaration

I, hereby submit a declaration that the tender submitted by the undersigned, on behalf of the tenderer ________________________________________(**Name of the tenderer**), shall net be withdrawn or modified during the period of validityor extended period of validity.

I, on behalf of the tenderer________________________________________ (**Name of the tenderer**), also accept the fact that in case the tender is withdrawn or modified during the period of it's validity /extended validity period or if we fail to sign the contract in case the contract is awarded to us or we fail to submit a performance security and additional performance security, if any, before the deadline fixed in the tender Document, then ________________________________________ (**Name of the tenderer**) will be debarred for participation in the tendering process for the procurements of this procurement Entity for a period of **one year** from the date of default.

Date:-
Place:-

(Signature of the Authorised Signotory, Official Seal)